


ರಾಮಮನೋಹರ ಲೋಹಿಯಾ
ಜೀವನಯಾನ

■ ನಟರಾಜ್ ಹುಳಿಯಾರ್
ಕಲೆ: ಎಚ್.ಎಸ್. ಮೋನಪ್ಪ

# ‘ರಾಷ್ಟ್ರದ ರಾಜಕಾರಣದ ಕೆಸರಿನಲ್ಲಿ ಯಾವುದೂ ಉಳಿಯುವುದಿಲ್ಲ...’

ಲೋಹಿಯಾ ವಿಶ್ವ ಪ್ರವಾಸ ಮುಗಿಸಿ ಭಾರತಕ್ಕೆ ಬರುವ ಹೊತ್ತಿಗೆ ಲಾಲ್‌ಬಹದ್ದೂರ್ ಶಾಸ್ತ್ರಿ ಪ್ರಧಾನಮಂತ್ರಿಯಾಗಿದ್ದರು.

ವಿದೇಶದಿಂದ ಹಿಂತಿರುಗಿದ ಮೇಲೆ ಬಿಹಾರದ ಸಾರ್ವಜನಿಕ ಸಭೆಯೊಂದಕ್ಕೆ ಹೊರಟ ಲೋಹಿಯಾ ವಿರುದ್ಧ ಕಾಂಗ್ರೆಸ್ಸಿನ ಒಂದು ಗುಂಪು ಅಸಹ್ಯ ಬೈಗುಳಗಳ ಪ್ರಯೋಗಕ್ಕಿಳಿದಿತ್ತು. ‘ಅಮೆರಿಕದಲ್ಲಿ ನೆಹರೂರನ್ನು ತೆಗಳಿರುವ ಲೋಹಿಯಾ ಬಿಹಾರದಿಂದ ಜೀವಸಹಿತ ಹೋಗಲು ಬಿಡುವುದಿಲ್ಲ’ ಎಂದು ಚೀರುತ್ತಿತ್ತು. ಲೋಹಿಯಾ ಇದಕ್ಕೆಲ್ಲ ಜಗ್ಗದೆ ಬಿಹಾರದ ಬೃಹತ್ ಸಭೆಯಲ್ಲಿ ಮಾತಾಡಿದರು. ಲೋಹಿಯಾ ಮಾತನ್ನು ಕೇಳಿಸಿಕೊಳ್ಳುವ ಜನರ ಸಂಖ್ಯೆಯೂ ಹೆಚ್ಚತೊಡಗಿತ್ತು.

ಲೋಹಿಯಾ ಪ್ರವಾಸದಲ್ಲಿದ್ದಾಗ ಸಮಾಜವಾದಿ ಪಕ್ಷ ಹಾಗೂ ಪ್ರಜಾ ಸಮಾಜವಾದಿ ಪಕ್ಷಗಳು ಒಗ್ಗೂಡಿ, ‘ಸಂಯುಕ್ತ ಸಮಾಜವಾದಿ ಪಕ್ಷ’ವಾಗಲು ಹೊರಟಿದ್ದವು. ಲೋಹಿಯಾ ಬಂದ ಮೇಲೆ ಪಕ್ಷದ ಸ್ವರೂಪದ ಬಗ್ಗೆ ಚರ್ಚೆ ಶುರುವಾಯಿತು. ಸಮಾಜವಾದಿ ಪ್ರಣಾಳಿಕೆಯ ಮುಖ್ಯ ಅಂಶಗಳನ್ನು ಒಪ್ಪಿಕೊಳ್ಳಬೇಕೆಂಬ ಲೋಹಿಯಾ ವಾದವನ್ನಾಗಲಿ, ಕಾಂಗ್ರೆಸ್ ವಿರೋಧವನ್ನಾಗಲಿ ಪಿ.ಎಸ್.ಪಿ. ನಾಯಕರು ಒಪ್ಪಲಿಲ್ಲ. ‘ಲೋಹಿಯಾ ಎಲ್ಲವನ್ನೂ ಹಾಳು ಮಾಡುತ್ತಿದ್ದಾರೆ’ ಎಂದ ಪಿ.ಎಸ್.ಪಿ. ನಾಯಕರಿಗೆ, ‘ಚಿಂತಿಸಬೇಡಿ, ನಾನು ಹಾಳು ಮಾಡುವವನಲ್ಲ’ ಎಂದರು ಲೋಹಿಯಾ.

ಸಂಯುಕ್ತ ಸಮಾಜವಾದಿ ಪಕ್ಷ ಅರಳುವ ಮೊದಲೇ ಮುದುಡಿತು. ಎರಡೂ ಬಣಗಳ ಸಮಾಜವಾದಿ ನಾಯಕರು ತಂತಮ್ಮ ಪಕ್ಷದಲ್ಲಿ ಮುಂದುವರಿದರು. ಉಪಚುನಾವಣೆಗಳಲ್ಲಿ ವಿರೋಧ ಪಕ್ಷಗಳು ಸಾಮಾನ್ಯ ಅಭ್ಯರ್ಥಿಯನ್ನು ನಿಲ್ಲಿಸಬೇಕೆಂಬ ಲೋಹಿಯಾ ಮಾತನ್ನು ಸಮಾಜವಾದಿ ನಾಯಕರು ಕೇಳಿಸಿಕೊಳ್ಳಲಿಲ್ಲ. ನೆಹರೂ ನಿಧನದ ನಂತರ ತೆರವಾಗಿದ್ದ ಫೂಲ್‌ಪುರ ಹಾಗೂ ಇನ್ನಿತರ ಉಪಚುನಾವಣೆಗಳಲ್ಲಿ ಎರಡೂ ಸಮಾಜವಾದಿ ಪಕ್ಷಗಳ ಅಭ್ಯರ್ಥಿಗಳು ಸೋತರು.

* * *

ಲಾಲ್‌ಬಹದ್ದೂರ್ ಶಾಸ್ತ್ರಿಯವರ ಆಡಳಿತ ಕಾಲದಲ್ಲಿ ಗಡಿ ಪ್ರದೇಶದಲ್ಲಿ ಪಾಕಿಸ್ತಾನದ ಹಸ್ತಕ್ಷೇಪ ಕೊಂಚ ಜೋರಾಗಿತ್ತು. ಭಾರತ–ಪಾಕಿಸ್ತಾನ ಸಮಸ್ಯೆ ಕುರಿತಂತೆ ಭಾರತದ ವಿಭಜನೆಯ ಕಾಲದಿಂದಲೂ ಲೋಹಿಯಾ ಎರಡೂ ದೇಶಗಳ ಸಹಬಾಳ್ವೆಯನ್ನೇ ಪ್ರತಿಪಾದಿಸುತ್ತಿದ್ದರು.

1.2.1950ರ ‘ಪ್ರಜಾವಾಣಿ’ಯ ಮುಖಪುಟ ವರದಿ ‘ಭಾರತ–ಪಾಕಿಸ್ತಾನ ಒಂದುಗೂಡಿದರೆ ಆರ್ಥಿಕ ಸುಧಾರಣೆ ಸಾಧ್ಯ’ವೆಂದು ಲೋಹಿಯಾ ಹೇಳಿದ್ದನ್ನು ದಾಖಲಿಸಿದೆ. ಅದೇ ದಿನ ರಾಷ್ಟ್ರಪತಿ ಬಾಬೂ ರಾಜೇಂದ್ರ ಪ್ರಸಾದ್ ಮಾಡಿದ ಲೋಕಸಭೆಯ ಭಾಷಣ ಕೂಡ ‘ಪಾಕಿಸ್ತಾನ–ಭಾರತ ಒಡಂಬಡಿಕೆ ಅನಿವಾರ್ಯ ಅಗತ್ಯ’ ಎಂದು ಸಾರುತ್ತದೆ.

ಆದರೆ, 1964ರ ಹೊತ್ತಿಗೆ ಜಗತ್ತಿನ ರಾಷ್ಟ್ರಗಳ ವರಸೆಗಳು ಬದಲಾಗಿದ್ದವು; ಪಾಕಿಸ್ತಾನ ಆಕ್ರಮಣಕಾರಿ ಮನೋಭಾವ ತೋರಿಸುತ್ತಿತ್ತು. ಹೀಗಾಗಿ, 1964ರಲ್ಲಿ ಲೋಹಿಯಾ ಪಾರ್ಲಿಮೆಂಟಿನಲ್ಲಿ ಹೇಳಿದ ಭಾರತ–ಪಾಕಿಸ್ತಾನಗಳ ಒಕ್ಕೂಟದ ಮಾತು ಬಹುತೇಕರಿಗೆ ಕೇವಲ ಆದರ್ಶದ ಮಾತು ಎನ್ನಿಸಿತು.

